"ಅವನ ಪ್ರಾರಂಭಿಕ ಚಿತ್ರವೆನ್ನುವಂತೆ ಕಾಣಿಸುತ್ತಿದೆ."

"ಹಸ್ತಾಕ್ಷರವೂ ಅವನದೇ! ಯಾವುದೇ ಸಂಶಯವಿಲ್ಲ."

ಅವನ ಬೆನ್ನ ಹಿಂದೆ ನಿಂತಿದ್ದವರೆಲ್ಲಾ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸತೊಡಗಿದರು.

''ಇದು ಯಾವಾಗ ರಚಿಸಿದ್ದು?" ಯಾರೋ ಕುತೂಹಲದಿಂದ ಕೇಳಿದರು.

"ಸಾವಿರದ ಒಂಬೈನೂರ ಹದಿಮೂರರಲ್ಲಿ."

"ಅವನಿಗೆ ಟ್ಯಾಟೂ ಮಾಡುವುದನ್ನು ಕಲಿಸಿದ್ದು ಯಾರು?"

"ನಾನೇ."

"ಆ ಮಹಿಳೆ?"

"ನನ್ನ ಹೆಂಡತಿ."

ಆ ಕಲಾ ಗ್ಯಾಲರಿಯ ಒಡೆಯ, ಈ ವರೆಗೂ ಡ್ರಿಯೋಲಿಯನ್ನು ಕಸದಂತೆ ಕಂಡು ಹೊರಗೆಸೆಯಲು ಪ್ರಯತ್ನ ಪಡುತ್ತಿದ್ದವನು ಕಿವಿಯಗಲ ಮುಗುಳುನಗುತ್ತಾ ಕೈಯೊಡ್ಡಿ ಮುಂದಕ್ಕೆ ಬಂದ.

"ಮೊನ್ಸಿಯೋರ್, ನಿಮ್ಮ ಬೆನ್ನ ಮೇಲಿನ ಪೇಂಟಿಂಗನ್ನು ನಾನು ಕೊಂಡುಕೊಳ್ಳುತ್ತೇನೆ." ಎಂದ.

"ಹೇಗೆ?" ಡ್ರಿಯೋಲಿ ಕೇಳಿದ.

"ಎರಡು ಸಾವಿರ ಫ್ರ್ಯಾಂಕುಗಳನ್ನು ಕೊಡುತ್ತೇನೆ."

"ಒಪ್ಪಲೇ ಬೇಡಿ. ಅದರ ಬೆಲೆ ಅದಕ್ಕಿಂತ ಇಪ್ಪತ್ತು ಪಟ್ಟು ಅಧಿಕವಾಗಿದೆ." ಯಾರೋ ಹೇಳಿದರು.

ಡ್ರಿಯೋಲಿ ಏನನ್ನೋ ಹೇಳಲು ಬಾಯ್ತೆರೆದ. ಆದರೆ, ಶಬ್ದಗಳೇ ಹೊರಡಲಿಲ್ಲ. ಸ್ವಲ್ಪ ಹೊತ್ತಿನ ಬಳಿಕ, "ಸರಿ, ನಾನು ನಿನಗೆ ಮಾರುವುದಾದರೂ ಹೇಗೆ?" ಎಂದ.

"ಅದೂ ನಿಜಾನೇ! ಅವನು ತನ್ನ ಬೆನ್ನನ್ನೇ ಮಾರುವುದಾದರೂ ಹೇಗೆ?" ಯಾರೋ ಉದ್ಗರಿಸಿದರು.

ಗ್ಯಾಲರಿಯ ಯಜಮಾನ ಅವನ ಬಳಿ ಬಂದು ಕಿವಿಯಲ್ಲಿ ಮೆಲ್ಲನೇ ಉಸುರಿದ: "ಮೊನ್ಸಿಯೊರ್, ನಾನು ನಿನ್ನನ್ನು ಶ್ರೀಮಂತನನ್ನಾಗಿಸುತ್ತೇನೆ. ನಾವು ನಿನ್ನ ಬೆನ್ನ ಮೇಲಿನ ಚಿತ್ರದ ಬಗ್ಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳೋಣ. ಏನಂತೀಯಾ?...

...ಆದರೆ, ಒಂದು. ಇಲ್ಲಿ ಒಂದು ತಾಂತ್ರಿಕ ಸಮಸ್ಯೆ ಇದೆ. ನಿನ್ನ ಚಿತ್ರವನ್ನು ಕೊಂಡರೆ ಅದನ್ನು ಪ್ರದರ್ಶಿಸುವುದಾದರೂ ಹೇಗೆ? ಒಂದರ್ಥದಲ್ಲಿ ನಿನ್ನ ಚಿತ್ರವನ್ನು ಕೊಂಡರೆ ನಿನ್ನನ್ನೇ ಕೊಂಡುಕೊಂಡಂತೆ ಅಲ್ವಾ? ನಿನ್ನನ್ನೂ ಕೊಂಡುಕೊಳ್ಳುವುದು ಅಂದರೆ... ನೀನು ಸಾಯುವವರೆಗೆ ಅದಕ್ಕೆ ಯಾವುದೇ ಬೆಲೆ ಇಲ್ಲ! ಅಂದ ಹಾಗೆ, ನಿಮ್ಮ ವಯಸ್ಸೆಷ್ಟು ಮೊನ್ಸಿಯೋರ್?"

"ಅರವತ್ತೊಂದು..."

"ನಿಮ್ಮ ಆರೋಗ್ಯ ಅಷ್ಟಕಷ್ಟೇ..." ಎಂದು ಅವನು ಹಳ್ಳಿಯ ರೈತ ಎತ್ತಿನ ಹಲ್ಲುಗಳನ್ನು ಪರೀಕ್ಷಿಸುವಂತೆ ಡ್ರಿಯೋಲಿಯನ್ನು ನಖಶಿಖಾಂತ ನೋಡತೊಡಗಿದ.

"ನೋಡಿ ಮೊನ್ಸಿಯೋರ್, ನಿಮ್ಮ ಮಾತು ನನಗೆ ಎಳ್ಳಷ್ಟೂ ಸರಿ ಬರುತ್ತಿಲ್ಲ." ಎಂದು ಡ್ರಿಯೋಲಿ ಕೈ ಕೊಡವಿದ. ಅದು ಗ್ಯಾಲರಿಯ ಮಾಲೀಕನ ಪಕ್ಕೆಗೆ ತಗುಲಿತು. ಆದರೂ ಅವನು ಕಿಂಚಿತ್ತೂ ಬೇಜಾರಿಲ್ಲದೆ ನಸುನಕ್ಕ.

"ಗೆಳೆಯಾ, ಸಮುದ್ರ ತೀರದಲ್ಲಿ ಸೂರ್ಯಸ್ನಾನ! ಒಂದು ಕೈಯಲ್ಲಿ 'ಬೋರ್ಡೋ' ದ್ರಾಕ್ಷಾಮದ್ಯ, ರಾಜಶೈಲಿಯ ಊಟ! ಏನಂತೀಯಾ?"

"ಇವೆಲ್ಲವೂ ನನ್ನ ಇಷ್ಟದವೇ!..." ಡ್ರಿಯೋಲಿ ಅನುಮಾನಿಸುತ್ತಾ ಹೇಳಿದ.

"ಸುತ್ತಲೂ ಮಾದಕ ಲಲನಾಮಣಿಗಳು..."

"ವ್ಹಾವ್!"